ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ೧೯೯೦ನೇ ಮೇ ಕೊನೆಯ ವಾರದಿಂದ ಪ್ರಾರಂಭಿಸಿದೆ. ಸದರಿ ಪ್ರತಿಮೆಯ ಅಂದಾಜು ವೆಚ್ಚ ೩.೨೫ ಲಕ್ಷ ರೂಪಾಯಿಗಳು.

ಶ್ರೀ ಕೆ. ಹೆಚ್. ಹನುಮೇಗೌಡ.— ಸ್ವಾಮಿ, ಮಾಜಿ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ಸ್ಥಾಪನೆ ಮಾಡಿದಾರಭ್ಯ ಸಾರ್ವಜನಿಕರು ಆ ಪ್ರತಿಮೆ ಅವರನ್ನು ಹೋಲುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಶಾಸನಸಭೆಯಲ್ಲೂ ಹಾಗೆಯೇ ಚರ್ಚೆಗೆ ಬಂದು ಪ್ರತಿಮೆಯನ್ನು ಬದಲಾವಣೆ ಮಾಡುತ್ತೇವೆಂದು ಸರ್ಕಾರದವರೂ ಹೇಳಿದ್ದರು. ಆದರೆ ಇದುವರೆಗೂ ಮಾಡಿಲ್ಲ.

ಅಧ್ಯಕ್ಷರು.— ಕೆಲಸ ಶುರುವಾಗಿದೆ ಎಂದು ಹೇಳಿದ್ದಾರೆ. ೧೯೯೦ನೇ ಮೇ ಕೊನೆಯ ವಾರದಿಂದ ಕೆಲಸ ಪ್ರಾರಂಭಿಸಿದೆ ಎಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.— ಹಾಗಿದ್ದರೆ ಕಂಪ್ಲೀಟ್ ಯಾವಾಗ ಮಾಡುತ್ತಾರೆಂಬುದನ್ನು ಹೇಳಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.— ಈಗಾಗಲೇ ಉತ್ತರ ಒದಗಿಸಿದ ಪ್ರಕಾರ ನಾವು ೨–೧೨–೮೯ ರಲ್ಲಿ ಆ ಪ್ರತಿಮೆಯನ್ನು ಮಾಡಲಿಕ್ಕೆ ಶ್ರೀಮಾನ್ ಕಂಜೀರಾಮನ್ ಅವರಿಗೆ ಈಗಾಗಲೇ ಹೇಳಿದ್ದೇವೆ. ಮುಂತ್ತು ೫ ತಿಂಗಳ ಕಾಲಾವಧಿಯಲ್ಲಿ ಮಾಡಬೇಕೆಂದು ಹೇಳಿದ್ದೇವೆ. ಕೆಲಸ ಈಗ ಪ್ರಗತಿಯಲ್ಲಿದೆ. ಆದಷ್ಟು ಜಾಗ್ರತೆ ಇದು ಕೆಲವೇ ತಿಂಗಳಲ್ಲೇ ಈ ಕೆಲಸ ಆಗುತ್ತದೆ. ಈ ಕೆಲಸ ಸಮರ್ಪಕವಾಗಿ ಆಗಬೇಕೆಂದು ಸ್ವಾತಂತ್ರ್ಯಯೋಧರೂ ಮಾಜಿ ಮಹಾನಗರ ಪಾಲಿಕೆ ಮೇಯರ್ ಅವರೂ ಆದ ಜೆ. ಲಿಂಗಯ್ಯನವರ ನೇತೃತ್ವದಲ್ಲಿ ಸಮಿತಿ ಮಾಡಿದ್ದು ಅವರು ಸಮರ್ಪಕವಾಗಿ ಕೆಲಸ ಆಗುವುದಕ್ಕೆ ಮಾನಿಟರ್ ಮಾಡುತ್ತಿದ್ದಾರೆ. ಆದ್ದರಿಂದ ಇದಕ್ಕೆ ಕಾಲಾವಕಾಶ ಹೆಚ್ಚು ತೆಗೆದುಕೊಳ್ಳುವುದಿಲ್ಲ.

ಪ್ರಶ್ನೆ ಸಂಖ್ಯೆ: ೧೨೯ (೧೭೫೬)

ಶ್ರೀ ಎಚ್. ಆರ್. ರಾಜು (ಸಹಕಾರ ರಾಜ್ಯ ಮಂತ್ರಿ).— ಅಧ್ಯಕ್ಷರೇ, ಇದಕ್ಕೆ ಟೈಮ್ ಬೇಕು ಎಂದು ಕೇಳಿದ್ದೇನೆ,

ಅಧ್ಯಕ್ಷರು.— ಬನ್ನಿಕೋಡ್ ಅವರೇ, ಅವರು ಟೈಂ ಕೇಳಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್.— ನಾನು ಕೇಳಿರುವ ಪ್ರಶ್ನೆ ಬಹಳ ಸರಳವಾದುದು. ಇದಕ್ಕೆ ಯಾವುದೇ ಮಾಹಿತಿಯನ್ನು ಯಾರಿಂದಲೂ ಪಡೆಯಬೇಕಾಗಿಲ್ಲ. ರೈತರು ಬಿತ್ತನೆ ಮಾಡಬೇಕಾದ ಕಾಲ ಪ್ರಾರಂಭವಾಗಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ.

ಅಧ್ಯಕ್ಷರು.— ಅವರು ಟೈಂ ಬೇಕು ಎಂದು ಕೇಳಿದ್ದಾರೆ. ನಾನು ಕೊಟ್ಟಿದ್ದೇನೆ. ಈಗ ವಾಟಾಳ್ ನಾಗರಾಜ್ ಅವರು ಪ್ರಶ್ನೆ ಕೇಳಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್.— ಈ ಬಗ್ಗೆ ವಿಳಂಬ ಮಾಡುವುದರಿಂದ ರೈತರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ಉತ್ತರ ಕೊಡಬೇಕು.

ಅಧ್ಯಕ್ಷರು.— ಮುಂದಿನ ವಾರ ನೋಡೋಣ.

ಸಚಿವರುಗಳಿಂದ ಆಸ್ತಿಪಾಸ್ತಿಯ ಘೋಷಣೆ

೨೧೧ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಚಿವರುಗಳು ತಮ್ಮ ಆಸ್ತಿಪಾಸ್ತಿಗಳನ್ನು ಬಹಿರಂಗ ಪಡಿಸಿಕೊಳ್ಳಬೇಕೆಂಬ ನಿಯಮ ವಿದೆಯೇ ?

ಆ) ನಿಯಮವಿಲ್ಲದಿದ್ದರೆ ನಿಯಮ ಮಾಡಲಾಗುವುದೇ ?

ಇ) ಇದುವರೆಗೆ ಯಾವ ಯಾವ ಸಚಿವರುಗಳು ತಮ್ಮ ಆಸ್ತಿಪಾಸ್ತಿಗಳನ್ನು ಬಹಿರಂಗ ಪಡಿಸಿಕೊಂಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಇಲ್ಲ.

ಆ) ಇಲ್ಲ.

ಇ) ಮುಖ್ಯ ಮಂತ್ರಿಗಳು ತಮ್ಮ ಆಸ್ತಿಪಾಸ್ತಿಗಳನ್ನು ಬಹಿರಂಗ ಪಡಿಸಿಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ನನ್ನ ಉತ್ತರದಲ್ಲಿ ಎಸ್. ಮಹದೇವ್, ಮುಖ್ಯ ಮಂತ್ರಿಗಳು ಎಂದು ಸಹ ಮಾಡಿದ್ದಾರೆ. ಈ ಬದಲಾವಣೆ ಯಾವಾಗ ಆಯಿತು ? ರಾತ್ರೋರಾತ್ರಿ ಬದಲಾವಣೆ ಮಾಡಿದ್ದಾರಾ ? ಇಲ್ಲಿ ಎಸ್. ಮಹದೇವ್ ಮುಖ್ಯಮಂತ್ರಿ ಎಂದಿದೆ, ನಿಮಗೆ ಅನುಮಾನ ಬಂದಿದೆಯೇ ? ಅಥವಾ ಅವರು ಡೆಲ್ಲಿಯಲ್ಲಿರುವಾಗಲೇ ಇಲ್ಲಿ ಬದಲಾವಣೆ ಮಾಡಿದ್ದಾರಾ ? ಎಸ್, ಮಹದೇವ್ ಯಾರು ? ಇದನ್ನು ಹೇಳಬೇಕು. ಇದು ನನಗೆ ಬಹಳ ಆಶ್ಚರ್ಯವಾಗುತ್ತಿದೆ.

ಅಧ್ಯಕ್ಷರು.—ಹಿಂದೆ ಈ ಸದನದಲ್ಲಿ ನಾನು ಹೇಳಿದ್ದೇನೆ. ಈ ಪ್ರಶ್ನೆಗಳಿಗೆ ಮಂತ್ರಿಗಳೇ ಅವರ ಹಸ್ತಾಕ್ಷರ ಹಾಕಬೇಕೆಂದು. ಯಾವುದೋ ಆಚಾತುರ್ಯ ನಡೆದಿದೆ ಎಂದು ಕಾಣುತ್ತದೆ ಆದ್ದರಿಂದ...

ಶ್ರೀ ಎಂ. ವೀರಪ್ಪ ಮೊಯಿಲಿ.—ಹಿಂದಿನ ಪದ್ಧತಿ ಅಪ್ಪಿತಪ್ಪಿ ಬರುತ್ತದೆ. ಈ ಅಚಾತುರ್ಯ ಕ್ಕಾಗಿ ನಾವೂ ವಿಷಾದಿಸುತ್ತೇವೆ. ಇನ್ನು ಮುಂದೆ ಇಂಥದ್ದು ಆಗದಹಾಗೆ ನೋಡಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಉತ್ತರದಲ್ಲಿ ಮುಖ್ಯಮಂತ್ರಿಗಳೊಬ್ಬರು ಆಸ್ತಿ ಘೋಷಣೆ ಮಾಡಿದ್ದಾರೆಂದು ಹೇಳಿದ್ದೀರಿ. ಮುಖ್ಯಮಂತ್ರಿಗಳ ಆದರ್ಶವನ್ನು ಸಚಿವ ಸಂಪುಟದ ಇತರ ಸಚಿವರು ಏತಕ್ಕೆ ಪಾಲಿಸಲಿಲ್ಲ ? ಈಗಲಾದರೂ ಪಾಲಿಸುತ್ತೀರಾ ? ಎಷ್ಟು ಬೇಗ ತಮ್ಮ ತಮ್ಮ ಆಸ್ತಿ ಘೋಷಣೆ ಮಾಡಿಕೊಳ್ಳುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಈಗ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಪ್ರಕಾರ ಜೂನ್ ೩೦ರೊಳಗೆ ಶಾಸಕರು, ಸಚಿವರು ಕಾನೂನಿನ ಪ್ರಕಾರ ಆಸ್ತಿಪಾಸ್ತಿಗಳ ವಿವರ ಕೊಡಬೇಕು. ಅದೇ ರೀತಿ ಸಚಿವರು ಆಸ್ತಿಪಾಸ್ತಿಗಳ ವಿಚಾರವನ್ನು ಬಹಿರಂಗಪಡಿಸತಕ್ಕ ನಿಯಮ ನಮ್ಮಲ್ಲಿಲ್ಲ.

೨-೧೦ ಪಿ. ಎಂ.

ನಾವು ಅದನ್ನು ಫೋರ್ಸ್ ಮಾಡುವಹಾಗೆ ಇಲ್ಲ. ಬೇರೆ ಬೇರೆ ಮಂತ್ರಿಗಳು ತಮ್ಮ ಆಸಿ ವಿವರಗಳನ್ನು ಕೊಡುವುದಿದ್ದರೆ ಅದನ್ನು ಕೊಡಬಹುದು ಮಾನ್ಯ ಮುಖ್ಯಮಂತ್ರಿಗಳಿಗೆ ಈ ಕೆಳಗೆ ತಿಳಿಸಿರುವ ಮಂತ್ರಿಗಳು ತಮ್ಮ ಆಸ್ತಿಪಾಸ್ತಿ ವಿವರವನ್ನು ಕೊಟ್ಟಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಮಿನಿಸ್ಟಾರಿಕೆ, ಬಂದರು, ನಗರಾಭಿವೃದ್ಧಿ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಯೋಜನೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪುವಾಸೋದ್ಯಮ ಸಚಿವರು ತಮ್ಮ ಆಸ್ತಿ ಪಾಸ್ತಿಗಳ ವಿವರಣೆಯನ್ನು ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದಾರೆ. ಉಳಿದವರು ಬಹುಶಃ ತಮ್ಮ ವಿವರವನ್ನು ಕೊಡುತ್ತಾರೆ Some of the Ministers will be submit ing to-day or at a latter date but it is left to them and we cannot force them. ಅದನ್ನೆಲ್ಲಾ ಬಹಿರಂಗ ಪಡಿಸುವುದು ಅಥವಾ ಬಿಡುವುದು ಅವರಿಗೇ ಸಂಬಂಧಪಟ್ಟಿದ್ದು ಹಾಗೆ ಆಸ್ತಿಪಾಸ್ತಿ ವಿವರಗಳನ್ನು ಕೆಲವು ಸಚಿವರು ಕೊಟ್ಟಿದ್ದಾರೆ. ಆದರೆ ಲೋಕಾಯುಕ್ತಕ್ಕೆ ವಿವರ ಕೊಡಲೇಬೇಕು. ಅದು ಮ್ಯಾಂಡೇಟರಿ ಅದನ್ನು ಅವರು ಕೊಡುತ್ತಾರೆ.

ಬಗರ್‌ಹುಕುಂ ಸಾಗುವಳಿದಾರರ ಜಮೀನು ಖಾಯಂ ಬಗ್ಗೆ

೧೬೬. ಶ್ರೀ ಬಿ ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಗರ್‌ಹುಕುಂ ಸಾಗುವಳಿದಾರರಿಗೆ ಜಮೀನು ಖಾಯಂ ಮಾಡುವ ಉದ್ದೇಶ ಸರ್ಕಾರಕ್ಕಿ ಇದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?